ಕರ್ನಾಟಕ ಸರ್ಕಾರ

## ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ನೇವಿ-1/ಅಆನೇ/109/2020-21

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 07 .05.2022.

## ಸುತ್ತೋಲೆ

ವಿಷಯ: ಅನುಕಂಪದ ಆಧಾರದ ನೇಮಕಾತಿಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಸಲ್ಲಿಸುವ ಬಗ್ಗೆ.

*****

ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ ಪ್ರಾದೇಶಿಕ ಜಂಟಿ ನಿರ್ದೇಶಕರುಗಳ ಕಛೇರಿ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿವಿಧ ವೃಂದದ ಅಧಿಕಾರಿ/ನೌಕರರು ಸೇವೆಯಲ್ಲಿದ್ದಾಗಲೇ ನಿಧನ ಹೊಂದಿದ ಪ್ರಯುಕ್ತ ಮೃತ ಅಧಿಕಾರಿ/ನೌಕರರ ಅವಲಂಬಿತ ಕುಟುಂಬ ಸದಸ್ಯರೊಬ್ಬರಿಗೆ ಅನುಕಂಪದ ಆಧಾರದ ನೇಮಕಾತಿ ನೀಡುವ ಸಂಬಂಧ, ಪ್ರಾದೇಶಿಕ ಕಛೇರಿ/ಕಾಲೇಜುಗಳಿಂದ ಸಲ್ಲಿಸುತ್ತಿರುವ ಪ್ರಸ್ತಾವನೆಗಳನ್ನು ಯಥಾವತ್ತಾಗಿ ಸಲ್ಲಿಸಲಾಗುತ್ತಿದೆ.

ಈ ರೀತಿ ಸಲ್ಲಿಕೆಯಾಗುತ್ತಿರುವ ಪ್ರಸ್ತಾವನೆಗಳನ್ನು ಜಂಟಿ ನಿರ್ದೇಶಕರ/ಪ್ರಾಂಶುಪಾಲರ ಹಂತದಲ್ಲಿ ನಿಯಮಾನುಸಾರ ಪರಿಶೀಲಿಸದೇ, ಅರ್ಜಿದಾರರು ಸಲ್ಲಿಸುವ ಮನವಿಗಳನ್ನು ಯಥವತ್ತಾಗಿ / ಮುಂದಿನ ಕ್ರಮಕ್ಕೆ ಎಂಬುದಾಗಿ ತಿಳಿಸಿ, ಕೇಂದ್ರ ಕಛೇರಿಗೆ ಸಲ್ಲಿಸುತ್ತಿರುವುದು ಕಂಡುಬಂದಿರುತ್ತದೆ. ಇದರಿಂದಾಗಿ, ಸರ್ಕಾರದ ನಿಯಮಗಳನ್ವಯ ಅಗತ್ಯ ದಾಖಲೆಗಳನ್ನು ಪಡೆಯಲು ಕೇಂದ್ರ ಕಛೇರಿಯಿಂದಲೇ ಕ್ರಮವಹಿಸಬೇಕಾಗಿರುವುದರಿಂದ, ಅರ್ಜಿದಾರರಿಗೆ ಸೂಕ್ತ ಸಮಯದಲ್ಲಿ ನೇಮಕಾತಿ ಆದೇಶ ನೀಡುವಲ್ಲಿ ವಿಳಂಬವಾಗುತ್ತಿದೆ. ಈ ಬಗ್ಗೆ ಈ ಹಿಂದೆ ಹಲವು ಬಾರಿ ಸುತ್ತೋಲೆಗಳನ್ನು ಹೊರಡಿಸಿ, ತಿಳಿಸಿದ್ದಾಗ್ಯೂ ಸಹ, ಸೂಕ್ತ ದಾಖಲೆಗಳೊಂದಿಗೆ ಪ್ರಸ್ತಾವನೆಗಳನ್ನು ಸಲ್ಲಿಸದೆ ಲೋಪಗಳು ಪುನಾರವರ್ತನೆಯಾಗುತ್ತಿರುವುದು ವಿಪರ್ಯಾಸ. ಇಂತಹ ಕರ್ತವ್ಯ ಲೋಪಗಳನ್ನು ಗಂಭೀರವಾಗಿ ಪರಿಗಣಿಸಲಾಗಿದೆ.

ಆದ್ದರಿಂದ, ಇನ್ನು ಮುಂದೆ, ಅನುಕಂಪದ ಆಧಾರದ ನೇಮಕಾತಿಗೆ ಸಂಬಂಧಿಸಿದಂತೆ, ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಲೋಪಗಳು ಪುನಾರವರ್ತನೆಯಾಗದಂತೆ ಎಚ್ಚರವಹಿಸಿ. ಈ ಕೆಳಕಂಡ ದಾಖಲಾತಿಗಳೊಂದಿಗೆ ಪ್ರಸ್ತಾವನೆಯನ್ನು ಸೂಕ್ತ, ಶಿಫಾರಸ್ಸಿನೊಂದಿಗೆ ಕೇಂದ್ರ ಕಛೇರಿಗೆ ಸಲ್ಲಿಸುಂತೆ ಸೂಚಿಸಲಾಗಿದೆ.

1. ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996 ರನ್ವಯ ನಮೂನೆ 1 ಮತ್ತು 2 ರಲ್ಲಿ ಭರ್ತಿ ಮಾಡಿದ ಅರ್ಜಿ.
2. ಮರಣ ಪ್ರಮಾಣ ಪತ್ರದ ಮೂಲ ದಾಖಲೆ.
3. ಮೃತ ನೌಕರರ ಮೂಲ ಸೇವಾಪುಸ್ತಕ (ನಿಧನ ಮತ್ತು ಪಿಂಚಣಿ ಮಂಜೂರಾಗಿರುವ ಬಗ್ಗೆ ನಮೂದಿಸಿ/ದೃಢೀಕರಿಸಿ ಸಲ್ಲಿಸುವುದು.)
4. ಮೃತ ನೌಕರರ ಕುಟುಂಬದ ಜೀವಂತ ಸದಸ್ಯರ ಬಗ್ಗೆ ಸಂಬಂಧಪಟ್ಟ ತಹಶೀಲ್ದಾರರಿಂದ ಪಡೆದ ದೃಢೀಕರಣ ಪತ್ರದ ಮೂಲ ದಾಖಲೆ.

......2

5. ಮೃತ ನೌಕರರ ಕುಟುಂಬದ ಆದಾಯದ ಬಗ್ಗೆ ಸಂಬಂಧಪಟ್ಟ ತಹಶೀಲ್ದಾರರಿಂದ ಪಡೆದ ಆದಾಯ ಪ್ರಮಾಣ ಪತ್ರದ ಮೂಲ ದಾಖಲೆ.
6. ಮೃತ ನೌಕರರ ಕುಟುಂಬದ ಸದಸ್ಯರಲ್ಲಿ ಯಾರಾದರೂ ಸರ್ಕಾರಿ/ಅರೆಸರ್ಕಾರಿ/ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗದಲ್ಲಿ ಇರುವ/ಇಲ್ಲದಿರುವ ಬಗ್ಗೆ ಸಂಬಂಧಪಟ್ಟ ತಹಶೀಲ್ದಾರರಿಂದ ಪಡೆದ ದೃಢೀಕರಣ ಪ್ರಮಾಣ ಪತ್ರ. ಕುಟುಂಬದಲ್ಲಿ ಯಾರಾದರೂ ಉದ್ಯೋಗದಲ್ಲಿದ್ದಲ್ಲಿ ಸಂಬಂಧಪಟ್ಟ ಕಛೇರಿ/ ಸಂಸ್ಥೆಯಿಂದ ವೇತನ ಪ್ರಮಾಣ ಪತ್ರದ ಮೂಲ ದಾಖಲೆ.
7. ಮೃತ ನೌಕರರ ಅವಲಂಬಿತ ಸದಸ್ಯರಿಗೆ ಮಂಜೂರಾಗಿರುವ ಪಿಂಚಣಿ ಮಂಜೂರಾತಿ ಆದೇಶದ ಮೂಲ ದಾಖಲೆ.
8. ಮೃತ ನೌಕರರ ಅವಲಂಬಿತ ಕುಟುಂಬದ ಇತರೆ ಸದಸ್ಯರು ಉದ್ಯೋಗ ನಿರಾಕರಣೆಯ ಬಗ್ಗೆ ನೋಟರಿಯವರಿಂದ ದೃಢೀಕರಿಸಿದ ನಿರಾಕ್ಷೇಪಣಾ ಪತ್ರ.
9. ಮೃತ ಸರ್ಕಾರಿ ನೌಕರರ ಪತ್ನಿಯು ಪತಿಯ ಮರಣಾನಂತರ ಮರುವಿವಾಹ ಆಗದೆ ಇರುವ ಬಗ್ಗೆ ಸಂಬಂಧಪಟ್ಟ ತಹಶೀಲ್ದಾರರಿಂದ ಪಡೆದ ದೃಢೀಕರಣ ಪತ್ರದ ಮೂಲ ದಾಖಲೆ.
10. ಅಭ್ಯರ್ಥಿಯ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಮೂಲ ಅಂಕಪಟ್ಟಿಗಳು.
11. ಸಂಬಂಧಪಟ್ಟ ತಾಲ್ಲೂಕು ತಹಶೀಲ್ದಾರ್‌ರವರಿಂದ ಪಡೆದ ಅಭ್ಯರ್ಥಿಯ ಜಾತಿ ಪ್ರಮಾಣ ಪತ್ರದ ಮೂಲ ದಾಖಲೆ.
12. ಅಭ್ಯರ್ಥಿಯ ನಡತೆ ಬಗ್ಗೆ ಇಬ್ಬರು ಗಣ್ಯವ್ಯಕ್ತಿಗಳಿಂದ ಪಡೆದ ನಡತೆ ಪ್ರಮಾಣ ಪತ್ರಗಳ ಮೂಲ ದಾಖಲೆ.
13. 371 (ಜೆ) ರನ್ವಯ ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ಸ್ಥಳೀಯ ಅಭ್ಯರ್ಥಿ/ವಾಸಸ್ಥಳ ದೃಢೀಕರಣ ಪತ್ರದ ಮೂಲ ದಾಖಲೆ.
14. ಮೃತ ಸರ್ಕಾರಿ ನೌಕರರು ಮರಣಕ್ಕೆ ಮುಂಚೆ ಸಲ್ಲಿಸಿದ ದೃಢೀಕೃತ ಚರಾಸ್ತಿ-ಸಿರಾಸ್ಥಿ ಪಟ್ಟಿ.
15. ಅಭ್ಯರ್ಥಿಯ ನಾಲ್ಕು(04) ಭಾವಚಿತ್ರಗಳು ಹಾಗೂ ಅಭ್ಯರ್ಥಿಯ ಮಾದರಿ ಸಹಿಗಳು (ಪ್ರಾಂಶುಪಾಲರು ದೃಢೀಕರಿಸಿರಬೇಕು)

27/05/2022

ಮುಖ್ಯ ಆಡಳಿತಾಧಿಕಾರಿಗಳು
ಕಾಲೇಜು ಶಿಕ್ಷಣ ಇಲಾಖೆ

<u>ಇವರಿಗೆ:</u>

1) ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ-ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2) ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ- ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.

<u>ಪ್ರತಿಯನ್ನು:</u>

1) ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ಸದರಿ ಸುತ್ತೋಲೆಯನ್ನು ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
2) ಕಛೇರಿ ಪ್ರತಿ.